**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 209 ಟಿಇಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04-12-2018

**ಸುತ್ತೋಲೆ**

To
Sri: Renukaprasad Asst-D-V | E-GOV
JD (Plan) / DVP (L/D)
ACM
ಕಾರ್ಯನಿರ್ವಹಿಸಿ
website ನಲ್ಲಿ ಪ್ರಕಟಿಸಿ
5/12/XVIII
6.00 PM

ವಿಷಯ:- ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಕೋರ್ಸುಗಳನ್ನು ಬೋಧಿಸಲು ಕಡ್ಡಾಯವಾಗಿ ಎಐಸಿಟಿಇ, ನವದೆಹಲಿ ರವರ ಅನುಮೋದನೆಯನ್ನು ಪಡೆಯುವ ಕುರಿತು.

ಉಲ್ಲೇಖ:- 01) ಸುತ್ತೋಲೆ ಸಂಖ್ಯೆ: ಇಡಿ 121 ಟಿಇಸಿ 2016 (ಭಾ), ದಿನಾಂಕ: 25-08-2016.
02) ಸುತ್ತೋಲೆ ಸಂಖ್ಯೆ: ಇಡಿ 132 ಟಿಇಸಿ 2017, ದಿನಾಂಕ: 13-03-2018.
03) ಎಐಸಿಟಿಇ, ನವದೆಹಲಿ ರವರ Advt. No: Approval/12/(03)2017.

>>><<<

ರಾಜ್ಯದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಕೋರ್ಸುಗಳಿಗೆ ಸಂಬಂಧಿಸಿದ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ನಿಯಮಾನುಸಾರ ಪ್ರತಿ ಸಾಲಿನಲ್ಲೂ ಎಐಸಿಟಿಇ, ನವದೆಹಲಿ ರವರಿಂದ ಪೂರ್ವಾನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ ಎಂದು ಉಲ್ಲೇಖ (01) ಮತ್ತು ಉಲ್ಲೇಖ (02)ರ ಸುತ್ತೋಲೆಗಳಲ್ಲಿ ಸ್ಪಷ್ಟಪಡಿಸಲಾಗಿರುವ ಬಗ್ಗೆ ಎಲ್ಲಾ ಸಂಸ್ಥೆಗಳ ಗಮನ ಸೆಳೆಯಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: ಸಿ.ಎ ನಂ:17869-17870/2017ರ ಪ್ರಕರಣದಲ್ಲಿ ದಿನಾಂಕ: 03-11-2017ರಂದು ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಅಧ್ಯಕ್ಷರು, ಎಐಸಿಟಿಇ, ನವದೆಹಲಿ ರವರ ಸಾರ್ವಜನಿಕ ಪ್ರಕಟಣೆ ಸಂಖ್ಯೆ: Approval/12(3)/2017,ರನ್ವಯ ಎಲ್ಲಾ ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ತಾಂತ್ರಿಕ ಶಿಕ್ಷಣದ ಕೋರ್ಸುಗಳನ್ನು ನಡೆಸಲು ಎಐಸಿಟಿಇ, ನವದೆಹಲಿ ಈ ಸಂಸ್ಥೆಯಿಂದ ಪೂರ್ವಾನುಮತಿಯನ್ನು ಪಡೆಯುವುದು ಅಗತ್ಯವಾಗಿರುತ್ತದೆ ಎಂದು, ಮುಂದುವರೆದು University departments/Constituent Colleges/Private Universities ಗಳು ಸಹ ಎ.ಐ.ಸಿ.ಟಿ.ಇ ಯ ಪೂರ್ವಾನುಮತಿ ಪಡೆಯಬಹುದೆಂದು ತಿಳಿಸಲಾಗಿದೆ.

2016-17 ನೇ ಸಾಲಿನಲ್ಲಿ ಎಐಸಿಟಿಇ, ನವದೆಹಲಿ ರವರ ದಿನಾಂಕ:12.05.2014 ರ ಪತ್ರದನ್ವಯ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು/ಖಾಸಗಿ ವಿಶ್ವವಿದ್ಯಾಲಯಗಳು/ಡೀಮ್ಡ್ ವಿಶ್ವವಿದ್ಯಾಲಯಗಳು ಹಾಗೂ ಯಾವುದೇ ಸ್ವರೂಪದ ಶಿಕ್ಷಣ ಸಂಸ್ಥೆಯಾದರು ಸಹ ತಾವು ನಡೆಸುವ ತಾಂತ್ರಿಕ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಎಐಸಿಟಿಇ, ನವದೆಹಲಿ ರವರಿಂದ ಅನುಮೋದನೆಯನ್ನು ಪಡೆದ ಅನುಮೋದಿತ ಇನ್‌ಟೇಕ್‌ನ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವಂತೆ, ತಪ್ಪಿದ್ದಲ್ಲಿ ಅಂತಹ ಶಿಕ್ಷಣ ಸಂಸ್ಥೆಯ/ಆಡಳಿತ ಮಂಡಳಿಯ ಮನವಿಗಳನ್ನು ಸರ್ಕಾರವು ಪರಿಗಣಿಸುವುದಿಲ್ಲವೆಂದು ಸ್ಪಷ್ಟೀಕರಿಸಿ ಸಂಖ್ಯೆ: ಇಡಿ 121 ಟಿಇಸಿ 2016 (ಭಾಗ), ದಿನಾಂಕ:25.08.2016 ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ.

ತಾಂತ್ರಿಕ ಕೋರ್ಸುಗಳನ್ನು ನಡೆಸಲು ಸಕ್ಷಮ ಸಂಸ್ಥೆಯಾದ ಎಐಸಿಟಿಇ, ನವದೆಹಲಿ ರವರಿಂದ ಪೂರ್ವಾನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆಯೆಂದು ಎಐಸಿಟಿಇ ಯು ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯ ಸಂಖ್ಯೆ:ಯುಬಿ/04(03)/2011 ರಲ್ಲಿ ಸ್ಪಷ್ಟೀಕರಿಸಿರುತ್ತದೆ. ಅಲ್ಲದೆ "ತಾಂತ್ರಿಕ ಶಿಕ್ಷಣ" ಎಂಬುದಕ್ಕೆ ಎಐಸಿಟಿಇ ಅಧಿನಿಯಮ 1987 ರಲ್ಲಿನ ಪ್ರಕರಣ ಸಂಖ್ಯೆ:2(ಜಿ) ಮತ್ತು

2116
23.40

Scanned by CamScanner

(ಹೆಚ್) ರಲ್ಲಿ ವ್ಯಾಖ್ಯಾನವನ್ನು ನೀಡಿದ್ದು, ಅದರಂತೆ 'ತಾಂತ್ರಿಕ ಶಿಕ್ಷಣ'ವನ್ನು ನಡೆಸಲು ಅದೇ ಅಧಿನಿಯಮದ ಪ್ರಕರಣ ಸಂಖ್ಯೆ:10(ಕೆ) ರನ್ವಯ ಎಐಸಿಟಿಇ, ನವದೆಹಲಿ ರವರ ಪೂರ್ವಾನುಮೋದನೆ ಕಡ್ಡಾಯವಾಗಿರುತ್ತದೆ.

ಈ ಸಂಬಂಧ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾದ ಭಾರತಿ ದಾಸನ್ ವಿಶ್ವವಿದ್ಯಾಲಯ ಮತ್ತು ಇತರರು ವಿರುದ್ಧ ಎಐಸಿಟಿಇ ಮತ್ತು ಇತರರ ಪ್ರಕರಣದಲ್ಲಿ ತಾಂತ್ರಿಕ ಕೋರ್ಸುಗಳಿಗೆ ಎಐಸಿಟಿಇ ಪೂರ್ವಾನುಮೋದನೆಯನ್ನು ಪಡೆಯುವ ಬಗ್ಗೆ ನಿರ್ದೇಶನವಿರುವುದನ್ನು ಸ್ಪಷ್ಟೀಕರಿಸುತ್ತದೆ.

ಶೈಕ್ಷಣಿಕ ವರ್ಷ 2019-2020ನೇ ಸಾಲಿನಿಂದ ಈಗಾಗಲೇ ಹಾಲಿ ನಡೆಸುತ್ತಿರುವ ಕೋರ್ಸುಗಳು ಹಾಗೂ ಅವುಗಳ ಪ್ರವೇಶಾತಿ ಸಂಖ್ಯೆ ಹಾಗೂ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಕೋರ್ಸುಗಳನ್ನು ಪ್ರಾರಂಭಿಸುವ ಹಾಗೂ ಅವುಗಳ ಪ್ರವೇಶಾತಿ ಸಂಖ್ಯೆಯನ್ನು ಕಡ್ಡಾಯವಾಗಿ ಎ.ಐ.ಸಿ.ಟಿ.ಇ ಯಿಂದ ನಿಯಮಾನುಸಾರ ಪೂರ್ವಾನುಮತಿ ಪಡೆದು ತಾಂತ್ರಿಕ ಕೋರ್ಸುಗಳನ್ನು ನಡೆಸಿದ್ದಲ್ಲಿ ರಾಜ್ಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಸುಧಾರಿಸಲು ಸಹಾಯಕವಾಗುವುದು (In improving the quality and maintaining standards in the State).

ಈ ಹಿನ್ನೆಲೆಯಲ್ಲಿ, ಎಐಸಿಟಿಇ, ನವದೆಹಲಿ ರವರ ಸಾರ್ವಜನಿಕ ಪ್ರಕಟಣೆಯ ತತ್ಪರಿಣಾಮವಾಗಿ ಯಾವುದೇ ತಾಂತ್ರಿಕ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ಕಡ್ಡಾಯವಾಗಿ ಎಐಸಿಟಿಇ, ನವದೆಹಲಿ ರವರಿಂದ ಪೂರ್ವಾನುಮೊದನೆಯನ್ನು ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು/ಖಾಸಗಿ ವಿಶ್ವವಿದ್ಯಾಲಯಗಳು/ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಇತರ ಯಾವುದೇ ಸ್ವರೂಪದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಪಡೆಯತಕ್ಕದ್ದು ಎಂದು ಮತ್ತೊಮ್ಮೆ ಸ್ಪಷ್ಟೀಕರಿಸಲಾಗಿದೆ.

4/12/18

(ಮನೋರಮ.ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಇವರಿಗೆ,

1) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ, ಬೆಳಗಾಂ
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು (ಈ ಸುತ್ತೋಲೆಯನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳ ಗಮನಕ್ಕೆ ಬರುವಂತೆ ತಮ್ಮ ಅಂತರ್ಜಾಲದಲ್ಲಿ ಪ್ರಚುರಪಡಿಸಲು ಕೋರಿದೆ)
3) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ನಂ.30, ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು ಕೇಂದ್ರಿಯ ವಿಶ್ವವಿದ್ಯಾಲಯ ಆವರಣ, ಗಾಂಧಿನಗರ, ಬೆಂ-09.
4) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
5) ಉಪ ಕುಲಪತಿಗಳು, ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು
6) ರಿಜಿಸ್ಟ್ರಾರ್, ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು
7) ಪ್ರಾಂಶುಪಾಲರು, ರಾಜ್ಯದಲ್ಲಿನ ಎಲ್ಲಾ ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು
8) Director, AICTE-South Western Regional Office, P.K. Block, Palace Road, Bengaluru – 560 009
9) ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
10) ಶಾಖಾ ರಕ್ಷಾ ಕಡತ/ಓ.ಡಿ.ಜಿ.ಸಿ.

Scanned by CamScanner